





ಕೆಲಸಗಾರ ಇರುವೆಗಳಲ್ಲಿ, ಗಾತ್ರ ಮತ್ತು ನಿರ್ದಿಷ್ಟ ಕೆಲಸಗಳ ಆಧಾರದ ಮೇಲೆ ಪ್ರಮುಖ ಕೆಲಸಗಾರರು ಮತ್ತು ಕಡಿಮೆ ಸಾಮರ್ಥ್ಯದ ಕೆಲಸಗಾರರು ಎಂದು ಎರಡು ಉಪಜಾತಿಗಳಿವೆ. ಪ್ರಮುಖ ಕೆಲಸಗಾರರು ಗಾತ್ರದಲ್ಲಿ ಉಳಿದವುಗಳಿಗಿಂತ ದೊಡ್ಡದಾಗಿದ್ದು, ಬಲವಾದ ದವಡೆಗಳನ್ನು ಹೊಂದಿರುತ್ತವೆ. ಎಲೆಗಳನ್ನು ಕತ್ತರಿಸಿ, ಜೋಡಿಸಿ ಗೂಡುಗಳನ್ನು ಕಟ್ಟುವುದು, ದೊಡ್ಡ ಬೇಟೆಗಳನ್ನು ಗೂಡಿಗೆ ಸಾಗಿಸುವುದು ಮೊದಲಾದ ಕಾರ್ಯಗಳನ್ನು ಇವು ಅಚ್ಚುಕಟ್ಟಾಗಿ ನಿರ್ವಹಿಸುತ್ತವೆ. ಗೂಡುಗಳ ರಕ್ಷಣೆಯ ಜವಾಬ್ದಾರಿಯೂ ಇವುಗಳದೇ. ಒಳ ನುಗ್ಗುವ ಪರಭಕ್ಷಕಗಳನ್ನು ತಮ್ಮ ಶಕ್ತಿಯುತ ದವಡೆಗಳಿಂದ ಕಚ್ಚಿ, ಆಕ್ರಮಣ ನಡೆಸುತ್ತವೆ. ತಮ್ಮ ನೆಲೆಗೆ ಅಪಾಯ ಒದಗಿದಾಗ ಎಚ್ಚರಿಕೆಯ 'ಫೆರೋಮೋನ್' (ರಾಸಾಯನಿಕ) ಸ್ರವಿಸಿ ತ್ವರಿತ ರಕ್ಷಣಾತ್ಮಕ ಕ್ರಮ ಕೈಗೊಳ್ಳುತ್ತವೆ.

ಕಡಿಮೆ ಸಾಮರ್ಥ್ಯದ ಕಾರ್ಮಿಕ ಇರುವೆಗಳು ಸಾಮಾನ್ಯವಾಗಿ ಸಂಸಾರದ ಆರೈಕೆ, ಗೂಡಿನ ಸ್ವಚ್ಛತೆಯ ನಿರ್ವಹಣೆ, ಆಹಾರ ಸರಬರಾಜು ಮುಂತಾದ ಕಾರ್ಯದಲ್ಲಿ ತೊಡಗಿಕೊಳ್ಳುತ್ತವೆ. ಅಪ್ರಾಪ್ತ ಇರುವೆಗಳು ಗೂಡಿನೊಳಗೆ ಆಹಾರ ವಿತರಿಸುವ ಕೆಲಸ ಮಾಡುತ್ತವೆ. ಹೀಗೆ ಅವುಗಳ ಸಂಸಾರ ಒಂದು ಸಾಮುದಾಯಿಕ ಚಟುವಟಿಕೆಯಾಗಿದೆ.

ನೇಕಾರ ಇರುವೆಗಳ 'ಗೂಡು ನಿರ್ಮಾಣ' ಆರ್ಬೋರಿಯಲ್ ಪ್ರಪಂಚದ ವಾಸ್ತುಶಿಲ್ಪದ ಅದ್ಭುತಗಳಲ್ಲೊಂದು. ಮೊದಲು ಕೆಲಸಗಾರ ಇರುವೆಗಳು ಗೂಡು ಕಟ್ಟಲು ಬೇಕಾದ ಮರದ ಎಲೆಗಳನ್ನು ಒಂದಕ್ಕೊಂದು ಹತ್ತಿರ ಬರುವಂತೆ ಎಳೆಯುತ್ತವೆ. ತಮ್ಮದೇ ಲಾರ್ವಾಗಳನ್ನು ಬಳಸಿ, ಅವುಗಳ ವಿಶೇಷ ಗ್ರಂಥಿಯಿಂದ ಸ್ರವಿಸಿದ ರೇಷ್ಮೆಯ ಅಂಟನ್ನು ನಿಧಾನವಾಗಿ ಹಿಂಡಿ ಎಲೆಯ ಅಂಚುಗಳನ್ನು ನೇಯುತ್ತವೆ. ನಂತರ ಪರಿಣಾಮಕಾರಿಯಾಗಿ ಅವುಗಳನ್ನೆಲ್ಲ ಒಟ್ಟು ಸೇರಿಸಿ ಹೊಲಿಯುತ್ತವೆ.

ಸಾವಿರಾರು ಇರುವೆಗಳು ಸೇರಿ, ದೊಡ್ಡ ಗೂಡೊಂದನ್ನು 24 ಗಂಟೆಗೂ ಕಡಿಮೆ ಅವಧಿಯಲ್ಲಿ ನಿರ್ಮಿಸುತ್ತವೆ. ಮಳೆಯ ನೀರು ಗೂಡಿನೊಳಗೆ ಬಾರದಂತೆ ಎಚ್ಚರಿಕೆ ವಹಿಸುತ್ತವೆ. ನೇಕಾರ ಇರುವೆಗಳು ತಮ್ಮ ಗೂಡನ್ನು ಮರದ ಮೇಲಿನ ಆವರಣದಲ್ಲಿ ಕಟ್ಟುವುದರಿಂದ ನೆಲದ ಮೇಲಿನ ಪರಭಕ್ಷಕಗಳಿಂದ ಮತ್ತು ಪ್ರವಾಹದಂತಹ ಸಂಕಷ್ಟಗಳಿಂದ ರಕ್ಷಣೆ ಪಡೆಯುತ್ತವೆ. ಇವು ಮರದ ಮೇಲೆ ಮನೆ ಮಾಡುವ ಅದ್ಭುತ ತಾಂತ್ರಿಕ ಪರಿಣತಿ ಹೊಂದಿವೆ.

ನೇಕಾರ ಇರುವೆಗಳನ್ನು, ಅದರ ಮೊಟ್ಟೆ, ಲಾರ್ವಾಗಳನ್ನು ಮನುಷ್ಯರು ತಮ್ಮ ಆಹಾರವಾಗಿ ಬಳಸುತ್ತಾರೆ. ಪ್ರೊಟೀನ್‌ನ ರೂಪದಲ್ಲಿ ಸಮೃದ್ಧ ಪೌಷ್ಟಿಕ ಆಹಾರದ ಮೂಲವಾಗಿ ಸೇವಿಸುತ್ತಾರೆ. ಇರುವೆ ಮೊಟ್ಟೆಯ ಸೂಪ್‌ಗಳು ಥಾಯ್ ಪಾಕ ಪದ್ಧತಿಯಲ್ಲಿ ಸಾಂಪ್ರದಾಯಿಕ ಭಕ್ಷ್ಯಗಳಾಗಿವೆ.

ಪ್ರತಿಕ್ರಿಯಿಸಿ: feedback@sudha.co.in

